ಇ) ದಿನಾಂಕ:28.05.2014ರಂದು ಮೈಸೂರು ಜಿಲ್ಲೆಯ ಹೆಚ್.ಡಿ ಕೋಟೆ ತಾಲ್ಲೂಕಿನ ಶಿರಮಳ್ಳಿ ಗ್ರಾಮದ ಇಬ್ಬರು ಹಾಗೂ ದಿನಾಂಕ:31.05.2014ರಂದು ಚಾಮರಾಜನಗರ ಜಿಲ್ಲೆಯ ಯಂಳದೂರು ತಾಲ್ಲೂಕಿನಲ್ಲಿ ಒಬ್ಬರು ಸೇರಿ ಒಟ್ಟು 3 ಜನ ಸಿಡಿಲು ಬಡಿದು ಮೃತಪಟ್ಟಿದ್ದು, ಮೃತರ ಕುಟುಂಬಕ್ಕೆ ಕೇಂದ್ರ ಸರ್ಕಾರದ ಎನ್‌ಡಿಆರ್‌ಎಫ್/ ಎಸ್‌ಡಿಆರ್‌ಎಫ್ ಮಾರ್ಗಸೂಚಿಗಳನ್ವಯ ₹ 1.50/– ಲಕ್ಷಗಳಂತೆ ಒಟ್ಟು ₹ 4.50/–ಲಕ್ಷಗಳ ಪರಿಹಾರ ನೀಡಲಾಗಿದೆ.

ಈ) ಕೇಂದ್ರ ಸರ್ಕಾರದ ಎನ್‌ಡಿಆರ್‌ಎಫ್/ ಎಸ್‌ಡಿಆರ್‌ಎಫ್ ಮಾರ್ಗಸೂಚಿಗಳನ್ವಯ ಕ್ರಮ ಕೈಗೊಳ್ಳಲಾಗುತ್ತಿದೆ.

ಕನಿಷ್ಠ ವೇತನ

414(598); ಶ್ರೀ ರಾಜೀವ್ ಪಿ. (ಕುಡಚಿ)

ಅ) ಕನಿಷ್ಠ ವೇತನವನ್ನು ಸರ್ಕಾರ ಯಾವ ಆಧಾರದ ಮೇಲೆ ತೀರ್ಮಾನ ಕೈಗೊಳ್ಳಲಾಗುವುದು;

ಆ) ಬೆಂಗಳೂರಿನಲ್ಲಿ ಕನಿಷ್ಠ ವೇತನದಿಂದ ಜೀವ ಮಾಡಲು ಸಾಧ್ಯವೇ;

ಇ) ಬೆಂಗಳೂರಿನಲ್ಲಿ ಎಲ್ಲಾ ವಸತಿ, ಬಾಡಿಗೆ, ಬಸ್ ಪ್ರಯಾಣದರ, ವಿದ್ಯುತ್ ದರ ಮತ್ತು ನೀರಿನ ದರ ಎಲ್ಲವೂ ಸಹ ಅಧಿಕವಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಈ) ಖಾಸಗಿ ಭದ್ರತೆಯ ನೌಕರರ ಸಂಬಳ ಮತ್ತು ಗೃಹ ಸ್ವಚ್ಛತೆಗಾರರಿಗೆ ಸರ್ಕಾರದಿಂದ ಎಷ್ಟು ಕನಿಷ್ಠ ವೇತನ ನಿಗದಿ ಮಾಡಲಾಗಿದೆ;

ಉ) ಕನಿಷ್ಠ ವೇತನವನ್ನು ಸರ್ಕಾರ ₹ 10,000/–ಗಳಿಗೆ ಹೆಚ್ಚಿಸಲು ಸರ್ಕಾರಕ್ಕಿರುವ ತೊಂದರೆ ಏನು;

ಊ) ಇದರ ಬಗ್ಗೆ ಸರ್ಕಾರದ ಕ್ರಮವೇನು?

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ (ಮಾನ್ಯ ಕಾರ್ಮಿಕ ರಾಜ್ಯ ಸಚಿವರು)

ಅ) ಕನಿಷ್ಠ ವೇತನ ದರಗಳನ್ನು ನಿರ್ಧರಿಸುವ ಪೂರ್ವದಲ್ಲಿ ಶ್ರೀ ವಿ. ಶಾಂತಪ್ಪ ಸಮಿತಿ ನೀಡಿರುವ ಶಿಫಾರಸ್ಸುಗಳ ಆಧಾರದ ಮೇಲೆ ರಾಜ್ಯದ 16 ಕೈಗಾರಿಕಾ ಕೇಂದ್ರಗಳಿಂದ ಅತಿ ಜೀವನಾವಶ್ಯಕ ಪದಾರ್ಥಗಳ ಬೆಲೆಯನ್ನು ತರಿಸಿ ಸರಾಸರಿ ಲೆಕ್ಕಹಾಕಿ ವೇತನದ ದರಗಳನ್ನು ನಿಗಧಿ ಮಾಡಲಾಗುತ್ತದೆ. ಅಲ್ಲದೇ ಸರ್ವೋಚ್ಚ ನ್ಯಾಯಾಲಯವು M/s. Raptakes Brett & Co.Ltd and their Management ಈ ಪ್ರಕರಣದಲ್ಲಿ ನೀಡಿರುವ ತೀರ್ಪಿನಲ್ಲಿರುವ ಅಂಶಗಳನ್ನು ಸಹ ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

ಆ) ಸಾಮಾನ್ಯವಾಗಿ ಎಲ್ಲಾ ಅನುಸೂಚಿತ ಉದ್ದಿಮೆಗಳಲ್ಲಿ ಬೇರೆ ವಲಯಗಳಿಗೆ ಹೋಲಿಸಿದ್ದಲ್ಲಿ ಬೆಂಗಳೂರು ನಗರದಲ್ಲಿರುವ ಕಾರ್ಮಿಕರಿಗೆ ಹೆಚ್ಚು ವೇತನ ಸಿಗುವ ರೀತಿಯಲ್ಲಿ ಕನಿಷ್ಠ ವೇತನ ದರಗಳನ್ನು ನಿಗಧಿಪಡಿಸಲಾಗುತ್ತಿದೆ. ಕಾರ್ಮಿಕರ ಜೀವನಕ್ಕೆ ತಗಲುವ ವೆಚ್ಚ ಆಯಾ ಕಾರ್ಮಿಕರ ಜೀವನ ಶೈಲಿಯ ಮೇಲೆ ಅವಲಂಬಿತವಾಗಿರುತ್ತದೆ.

ಇ) ಹೌದು

ಈ) 'ಭದ್ರತಾ ಏಜೆನ್ಸಿ' ಮತ್ತು 'ಗೃಹಕೃತ್ಯ ಕಾರ್ಮಿಕರಿಗೆ' ಅನುಕ್ರಮವಾಗಿ ದಿನಾಂಕ 14-09-2011 ಹಾಗೂ 25-01-2011 ರಂದು ಕನಿಷ್ಠ ವೇತನ ದರಗಳನ್ನು ನಿಗಧಿಪಡಿಸಲಾಗಿರುತ್ತದೆ. ವಿವರಗಳನ್ನು **ಅನುಬಂಧ-1** ಮತ್ತು **ಅನುಬಂಧ-2** ರಲ್ಲಿ ಒದಗಿಸಿದೆ.

ಉ) ಕನಿಷ್ಠ ವೇತನ ದರಗಳನ್ನು ನಿಗಧಿಪಡಿಸಲು ವಿ. ಶಾಂತಪ್ಪ ಸಮಿತಿಯ ಶಿಫಾರಸ್ಸು ಹಾಗೂ ಸರ್ವೋಚ್ಚ ನ್ಯಾಯಾಲಯ M/s. Raptakes Brett & Co. Ltd and their Management ಪ್ರಕರಣದಲ್ಲಿ ನೀಡಿರುವ ತೀರ್ಪಿನಲ್ಲಿರುವ ಅಂಶಗಳನ್ನು ಪರಿಗಣಿಸಬೇಕಾಗುತ್ತದೆ. ಅದರಂತೆ,

ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನವನ್ನು ನಿಗಧಿಪಡಿಸಲಾಗುವುದು ಹಾಗೂ ಕಾಲಕಾಲಕ್ಕೆ ಪರಿಷ್ಕರಿಸಲಾಗುತ್ತದೆ.

ಊ) ಕನಿಷ್ಠ ವೇತನ ಕಾಯ್ದೆ, 1948 ಸೆಕ್ಷನ್ 3 (1)(ಬಿ) ಪ್ರಕಾರ ಐದು ವರ್ಷಗಳಿಗೆ ಮೀರದಂತೆ ಅವಶ್ಯಕತೆಗೆ ತಕ್ಕಂತ ಆಗಿಂದಾಗ್ಗೆ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಲಾಗುವುದು.

ಅನುಬಂಧ

2014–15ನೇ ಸಾಲಿಗೆ "ಭದ್ರತಾ ಏಜೆನ್ಸಿ" ಸಂಸ್ಥೆಗಳಿಗೆ ಪಾವತಿಸಬೇಕಾದ ಸೇವಾ ವೆಚ್ಚ

ಕ್ರ.ಸಂ	ಕೆಲಸದ ವರ್ಗಗಳು	ಸೇವಾ ವೆಚ್ಚದ ಪ್ರತಿ ತಿಂಗಳಿಗೆ	
		ಪಾಳಿ-1	ಪಾಳಿ-2
1	2	3	4
1.	ಕಚೇರಿಯ ಸೂಪರ್‌ವೈಸರ್	5231-40	4949-81
2.	ಕಚೇರಿಯ ಅಟೆಂಡರ್	2203-20	2203-20
3.	ಫೀಲ್ಡ್ ಅಟೆಂಡರ್	7431-60	7153-01
4.	ಪಾಸ್‌ಮೆನ್‌ಗಳು		
5.	ಕಚೇರಿಯ ವಾಚ್‌ಮೆನ್‌ಗಳು	4828-00	4536-55
6.	ಸಹಾಯಕ ಕಚೇರಿಯ ಅಟೆಂಡರ್	2203-20	2203-20
		7031-20	6939-75
7.	ಮೆಡಿಕಲ್ ಆಫೀಸರ್	4649-71	4418-52
		2203-20	2203-20
		6852-91	6651-17
8.	ಲಾಂಡ್ರಿಮೆನ್/ಇಸ್ತ್ರಿ ಹೈದರ್‌ಮೆನ್‌ಗಳು		
9.	ಕಿಚನ್‌ನ ಸಹಾಯಕರು	4159-91	3956-13
10.	ಅಡುಗೆಯವರು	2203-20	2203-20
11.	ಬೇಟೆ ಗಾರ್ಡ್ / ಬೇಟೆ ಗಾರ್ಡ್	6663-11	6359-05
12.	ಸೈಕಲ್‌ಸವಾರರು		
13.	ಲೆಕ್ಕಿಗರು/ಟೈಪಿಸ್ಟ್	4946-16	4681-41
14.	ಕಾವಲುಗಾರರು	2203-20	2203-20
15.	ಸಹಾಯಕ ಸೂಪರ್‌ವೈಸರ್‌ಗಳು	6849-36	6534-61
16.	ಗುಮಾಸ್ತರು		
17.	ಸೇವಾ ಸಿಬ್ಬಂದಿ	4533-11	4308-76
18.	ಸ್ವೀಪರ್‌ಗಳು/ಕಸಗುಡಿಸುವವರು	2203-20	2203-20
19.	ಕೆಲಸಗಾರರು ಅಥವಾ ಕೂಲಿಯವರು	6736-31	6411-96
20.	ಡ್ರೈವರ್		
21.	ಎಲೆಕ್ಟ್ರಿಷಿಯನ್	4533-11	4308-76
22.	ಪ್ಲಂಬರ್	2203-20	2203-20
23.	ಮೆಕ್ಯಾನಿಕ್	6736-31	6412-48

ಪಾಳಿ-1 : ಪ್ರತಿದಿನ ಬೆಳಿಗ್ಗೆ ೬ ಗಂಟೆಯಿಂದ ಮಧ್ಯಾಹ್ನ ೨ ಗಂಟೆಯವರೆಗಿನ ಸಮಯ ಹಾಗೂ ರಾತ್ರಿ ೭ ಗಂಟೆಯಿಂದ ಬೆಳಿಗ್ಗೆ ೬ ಗಂಟೆಯವರೆಗೆ.

ಪಾಳಿ-2 : ಪಾಳಿ-1 ರಲ್ಲಿ ಸೂಚಿಸಿರುವ ಸಮಯ ಹೊರತುಪಡಿಸಿದ ಸಮಯ

ಅನುಬಂಧ I

2014–15ನೇ ಸಾಲಿಗೆ "ಗೃಹಕೃತ್ಯ" ಕಾರ್ಮಿಕರಿಗೆ ಪಾವತಿಮಾಡಬೇಕಾದ ಕನಿಷ್ಠ ವೇತನ ದರಗಳು

ಕ್ರ ಸಂ	ಕೆಲಸದ ವರ್ಗಗಳು	ಕನಿಷ್ಠ ವೇತನ ದರಗಳು	
			ದಿನಕ್ಕೆ
1	2	3	4
1.	ಬಟ್ಟೆಗಳನ್ನು ಒಗೆಯುವುದು. ಪಾತ್ರೆಗಳನ್ನು ತೊಳೆಯುವುದು. ಮನೆ ನೋಡಿಕೊಳ್ಳುವುದು. ಹೊಕೆಗ ಮಕ್ಕಳನ್ನು ನೋಡಿಕೊಳ್ಳುವುದು	ಮಾಸಿಕ ವೇತನ ಕಾಳ್ಳುವಕ್ಕೆ ಒಟ್ಟು	139-20 84-73 223-93
2.	ಬಟ್ಟೆಗಳನ್ನು ಒಗೆಯುವುದು ಪಾತ್ರೆಗಳನ್ನು ತೊಳೆಯುವುದು. ಮನೆ ನೋಡಿಕೊಳ್ಳುವುದು. ಮತ್ತು ಮಕ್ಕ ಹೊಲೆಯುವುದು. ಮತ್ತು ಇತರೆ ಕೆಲಸ	ಮಾಸಿಕ ವೇತನ ಕಾಳ್ಳುವಕ್ಕೆ ಒಟ್ಟು	134-20 84-73 218-93

ತುಟ್ಟಿಭತ್ಯೆ ಮೂಲ ವೇತನದ ಜೊತೆಗೆ [illegible] ಸಂಸ್ಥೆಗಳಿಗೆ ಮಾತ್ರ ಸರ್ಕಾರಿ ಸೂಚನಾಂಕ 1944 ಅಂಶಗಳಿಗಿಂತ ಮಾಸಿಕ ಒಂದಕ್ಕೆ 4 ಪೈಸೆಯಿಂತೆ ತುಟ್ಟಿ ಭತ್ಯೆ ನೀಡತಕ್ಕದ್ದು.